ಇ) ವಿಟ್ಲವು ಬಂಟ್ವಾಳ ತಾಲ್ಲೂಕಿನಲ್ಲಿರುತ್ತದೆ ಹಾಗೂ ಈ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 79 ಗ್ರಾಮಗಳಿರುತ್ತವೆ ಇವುಗಳ ಪೈಕಿ 33 ಗ್ರಾಮಗಳು ರಾಷ್ಟ್ರೀಕೃತವಾದ ವಲಯದಲ್ಲಿದ್ದು, ಈ ಎಲ್ಲಾ ಗ್ರಾಮಗಳಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಪ್ರಸ್ತುತ ಒದಗಿಸಲಾಗಿದೆ ಬಿ ಸಿ ರೋಡ್‌ನಲ್ಲಿ ಘಟಕವನ್ನು ಪ್ರಾರಂಭಿಸುವ ಯೋಜನೆ ಇರುತ್ತದೆ ಇದರಿಂದಾಗಿ, ಬಂಟ್ವಾಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೆಚ್ಚಿನ ಸಾರಿಗೆ ಸೌಲಭ್ಯವನ್ನು ಒದಗಿಸಿಕೊಡಲು ಅನುಕೂಲವಾಗುವುದು

929 (1025) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಬಂಟ್ವಾಳ ತಾಲ್ಲೂಕು ವಿಟ್ಲ ಪೊಲೀಸ್ ಠಾಣೆಗೆ ಮೂಲ ಸೌಲಭ್ಯಗಳ ಕೊರತೆಯನ್ನು ಪರಿಹರಿಸುವಲ್ಲಿ ಸರ್ಕಾರದ ಸಕಾಲಿಕ ಕ್ರಮಗಳೇನು,

ಆ) ತಾಲ್ಲೂಕಿನ ಕಲ್ಲಡ್ಕದಲ್ಲಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದಲ್ಲಿ ಈಗ ಯಾವ ಹಂತದಲ್ಲಿದೆ,

ಇ) ಬಂಟ್ವಾಳ ತಾಲ್ಲೂಕಿನ ಬಂಟ್ವಾಳ ನಗರ ಮತ್ತು ಗ್ರಾಮಾಂತರ, ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅತೀ ಸೂಕ್ಷ್ಮ ಪ್ರದೇಶಗಳೆಂದು ಸರ್ಕಾರ ಗಮನಿಸಿದ್ದರೂ ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಹೆಚ್ಚಿನ ಸಿಬ್ಬಂದಿ ಮತ್ತು ಸಲಕರಣೆಗಳನ್ನು ಒದಗಿಸಿಕೊಡದೇ ಇರಲು ಕಾರಣಗಳೇನು,

ಈ) ಕಾನೂನು ಸುವ್ಯವಸ್ಥೆಯ ಸಮರ್ಪಕ ನಿರ್ವಹಣೆಗಾಗಿ ಇನ್ನಾದರೂ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ,

ಉ) ಬಂಟ್ವಾಳ ತಾಲ್ಲೂಕು ಹಲವು ಪಟ್ಟಣ ಪ್ರದೇಶಗಳನ್ನು ಹೊಂದಿರುವುದರಿಂದ ಟ್ರಾಫಿಕ್ ಪೊಲೀಸ್ ವ್ಯವಸ್ಥೆಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಪ್ರಸ್ತುತ ವಿಟ್ಲ ಪೊಲೀಸ್ ಠಾಣೆಯು ಕಸಬಾ ಗ್ರಾಮದ ಸರ್ವೆ ಸಂಖ್ಯೆ 593/7ರಲ್ಲಿ ಸರ್ಕಾರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನೂತನ ಕಟ್ಟಡದ ಅವಶ್ಯಕತೆ ಇದೆ ಹಾಲಿ ಪೊಲೀಸ್ ಠಾಣೆಯ ಪಿ ಎಸ್ ಐ –01, ಎ ಎಸ್ ಐ –02, ಹೆಚ್ ಸಿ –02, ಸಿ ಪಿ ಸಿ–09 ರವರಿಗೆ ವಸತಿ ಗೃಹಗಳನ್ನು ಒದಗಿಸಲಾಗಿದ್ದು, ಇನ್ನುಳಿದ ಎ ಎಸ್ ಐ –01, ಹೆಚ್ ಸಿ –05 ಮತ್ತು ಪಿ ಸಿ –14 ಇವರುಗಳಿಗೆ ವಸತಿ ಗೃಹದ ಅವಶ್ಯಕತೆಯಿದೆ ಈ ಪೊಲೀಸ್ ಠಾಣಾ ಕಟ್ಟಡ

ಹಾಗೂ ವಸತಿ ಗೃಹಗಳ ನಿರ್ಮಾಣ ಕಾರ್ಯಗಳು ಪ್ರಸ್ತುತ ಸಾಲಿನಲ್ಲಿ ಅನುದಾನ ಲಭ್ಯವಿರುವ ಕಾರಣ ಮುಂದಿನ ವರ್ಷದ ಕಾಮಗಾರಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ

ಇ) ದಿನಾಂಕ 24-2-2000ರಲ್ಲಿ ರಾಜ್ಯದ 277 ಪೊಲೀಸ್ ರಾಣೆಗಳನ್ನು ಕೊರತೆ ಸಿಬ್ಬಂದಿಗಳ ರಾಣೆಗಳೆಂದು ಗುರುತಿಸಿ ಸಿಬ್ಬಂದಿಗಳ ಕೊರತೆ ನೀಗಿಸಲು ವಿವಿಧ ದರ್ಜೆಯ ಒಟ್ಟು 26,689 ಹೆಚ್ಚುವರಿ ಹುದ್ದೆಗಳನ್ನು ಮುಂಬರುವ 5 ವರ್ಷಗಳಲ್ಲಿ ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು, ಈ ಪ್ರಸ್ತಾವನೆ ಆಧರಿಸಿ ಮಂಜೂರಾದ ಒಟ್ಟು 3,481 ಸಿಬ್ಬಂದಿಗಳನ್ನು 135 ಪೊಲೀಸ್ ರಾಣೆಗಳಿಗೆ ಹಂಚಲಾಗಿದೆ ರಾಜ್ಯದ ಒಟ್ಟಾರೆ ಪೊಲೀಸ್ ರಾಣೆಗಳ ಹೆಚ್ಚುವರಿ ಸಿಬ್ಬಂದಿಗಳ ಮಂಜೂರಾತಿ ಕುರಿತಂತೆ ಸರ್ಕಾರದ ಪರಿಶೀಲನೆಯಲ್ಲಿದೆ

ಈ ರಾಣೆಗಳ ಸೂಕ್ಷ್ಮತೆಯ ಹಿನ್ನೆಲೆಯಲ್ಲಿ, ಆಧುನಿಕ ಉಪಕರಣಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಲಾಗಿದೆ

ಈ) ಪ್ರಸ್ತುತ ಪೊಲೀಸ್ ಸಿಬ್ಬಂದಿ ಬಲವನ್ನು ಉಪಯೋಗಿಸಿಕೊಂಡು ಸ್ಥಳೀಯ ಕಾನೂನು ಸುವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ

ಉ) ಪರಿಶೀಲನೆಯಲ್ಲಿದೆ

931 (1034) ಶ್ರೀ ಪಾಟೀಲ್ ಎಂ ವೈ (ಅಫ್ಜಲಪುರ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಅಫಜಲಪುರ ಮತಕ್ಷೇತ್ರದ ಯಾತ್ರಾ ಸ್ಥಳವಾಗಿರುವ ದೇವಲಗಾಣಗಾಪುರ ಮತ್ತು ಘತ್ತರಗಿಯ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನದಲ್ಲಿದೆಯೇ,

ಆ) ಈ ರಸ್ತೆಗಳ ಅಭಿವೃದ್ಧಿ ಪಡಿಸಲು ಕೇಂದ್ರದ ಹೆರಿಟೇಜ್ ರಸ್ತೆ ಯೋಜನೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಲಾಗಿದೆಯಾ,

ಇ) ಈಗಾಗಲೇ ಪಟ್ಟಣ ಕ್ರಾಸ್‌ನಿಂದ ದೇವಲಗಾಣಗಾಮರವರೆಗೆ ಈ ಹೆರಿಟೇಜ್ ಯೋಜನೆಯಲ್ಲಿ ರಸ್ತೆ ನಿರ್ಮಾಣ ಮಾಡಲು ಸ್ಥಳೀಯರು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವಲ್ಲವೆ,

ಈ) ಹಾಗಿದ್ದಲ್ಲಿ, ಯಾವಾಗ ರಸ್ತೆ ಅಭಿವೃದ್ಧಿ ಪಡಿಸಲಾಗುವುದು?